ಪಟ್ಟಾ ಉಳಿಸಿಕೊಂಡಿರುತ್ತಾರೆ. ಹೈಕೋರ್ಟ್ ಆದೇಶವಲ್ಲದೆ ಮುಖ್ಯ ಮಂತ್ರಿಗಳನ್ನೊಳಗೊಂಡು ಸರಕಾರದ ಮೇಲಾಧಿಕಾರಿಗಳೆಲ್ಲರಿಂದಲೂ ಸಹಕಾರ ಸಿಕ್ಕಿದೆ. ಆದರೆ ಪಾವಗಡ ತಾಲ್ಲೂಕು ತಹಸೀಲ್ದಾರ್ ರೇಕೋ ಇವರಿಗೆ ಸಹಕಾರ ನೀಡಿಲ್ಲ ಜಮೀನಿನ ಹಕ್ಕುಬಾಧ್ಯತೆ ಪತ್ರ, ಸಾಗುವಳಿ ಚೀಟಿ ಪತ್ರ, ಆರ್. ಆರ್. ಇಂಡೆಕ್ಸ್ ಪಹಣಿ ಪಾತ್ರ ಖರೀದಿ ಪಟ್ಟಾ ವಗೈರೆ ಮಾಡಿಕೊಡುವಂತೆ ಮೇಲಾಧಿಕಾರಿಗಳು ಆದೇಶ ನೀಡಿದ್ದಾರೆ. ಅಪರಾಧಿಯಿಂದ ತೊಂದರೆಯಾಗದಂತೆ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ತಹಸೀಲ್ದಾರ್ ಅವರಿಗೆ ತುರ್ತು ನಿರ್ದೇಶನ ನೀಡಬೇಕೆಂದು ಕಂದಾಯ ಸಚಿವರನ್ನು ಒತ್ತಾಯಿಸಿ, ಈ ಬಗ್ಗೆ ಹೇಳಿಕೆ ನೀಡಬೇಕೆಂದು ಆಗ್ರಹ ಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಹೇಳಿಕೆ ತರಿಸಿಕೊಡುತ್ತೇನೆ.

8) ಕಾರವಾರ ತಾಲ್ಲೂಕು ಮಲ್ಲಾಪುರ ಗ್ರಾಮದಲ್ಲಿ ಕೈಗಾರಿಕಾ ವಿದ್ಯುತ್ ಕೇಂದ್ರದ ಟೌನ್‌ಶಿಪ್ ನಿರ್ಮಾಣಕ್ಕಾಗಿ ಜಮೀನು ಕಳೆದು ಕೊಂಡವರಿಗೆ ಪರಿಹಾರ ನೀಡದಿರುವುದು.

ಶ್ರೀ ಪ್ರಭಾಕರ ಎನ್. ರಾಣೆ ಮಾನ್ಯ ಅಧ್ಯಕ್ಷರೇ.—

ಕಾರವಾರ ತಾಲ್ಲೂಕಿನ ಮಲ್ಲಾಪುರ ಗ್ರಾಮದಲ್ಲಿ ಕೈಗಾರಿಕಾ ವಿದ್ಯುತ್ ಕೇಂದ್ರ ಟೌನ್ ಷಿಪ್ ನಿರ್ಮಾಣಕ್ಕಾಗಿ ಖಾಸಗಿಯವರ ಜಮೀನಿನಲ್ಲಿ ಕಟ್ಟಡಗಳ ನಿರ್ಮಾಣ ಪ್ರಾರಂಭಿಸಿದಾಗಲೂ ಸಹ ಈ ಪರಿಗೂ ಜಮೀನಿನ ಮಾಲೀಕರಿಗೆ ಪರಿಹಾರ ನೀಡಿರುವುದಿಲ್ಲ. ಪರಿಹಾರ ನೀಡದೆ ಜಮೀನು ವಶಪಡಿಸಿ ಕೊಂಡದ್ದನ್ನು ಪ್ರತಿಭಟಿಸಿ ಸಂಬಂಧಪಟ್ಟ ರೈತರು ಚಳುವಳಿ ಮಾರ್ಗ ಹಿಡಿದಾಗ ಒಂದು ತಿಂಗಳೊಳಗೆ ಪರಿಹಾರ ನೀಡುತ್ತೇವೆಂದು ಭರವಸೆ ನೀಡಿದ ಅಧಿಕಾರಿಗಳು ಅನೇಕ ತಿಂಗಳು ಉರುಳಿ ಹೋದರೂ ಸಹ ರೈತರಿಗೆ ಪರಿಹಾರ ನೀಡಿರುವುದಿಲ್ಲ. ಈಗಲಾದರೂ ಸರಕಾರ ತನ್ನ ಬೇಜಾವಾಬ್ದಾರಿ ತನವನ್ನೂ ಬಿಟ್ಟು ಜನ ತಾಳ್ಮೆ ಕಳೆದುಕೊಂಡು ಉಗ್ರ ಚಳವಳಿ ಮಾರ್ಗ ಹಿಡಿಯುವ ಮೊದಲೇ ರೈತರಿಗೆ ಪರಿಹಾರ ನೀಡಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ,

ಶ್ರೀ ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಉತ್ತರವನ್ನು ತರಿಸಿಕೊಡುತ್ತೇನೆ.

9) ಕನ್ನಡ ಶೀಘ್ರಲಿಪಿಯ ಪುಸ್ತಕವನ್ನು ಮುದ್ರಿಸಲು ಒತ್ತಾಯ

ಶ್ರೀ ಡಿ. ಎ. ಚಿನ್ನಪ್ಪ.— ಮಾನ್ಯ ಅಧ್ಯಕ್ಷರೇ, ಕನ್ನಡ ಕಾವಲು ಸಮಿತಿ ನೇಮಿಸುವ ಮೂಲಕ ರಾಜ್ಯದ ಆಡಳಿತವೆಲ್ಲಾ ಕನ್ನಡದಲ್ಲೇ ಆಗಬೇಕೆಂದೂ ರಾಜ್ಯ ಸರ್ಕಾರವು ಆದೇಶಿಸಿದೆ. ವಿಶ್ವ ಕನ್ನಡ ಸಮ್ಮೇಳನಗಳನ್ನೂ ನಡೆಸಲಾಯಿತು. ಆಡಳಿತ ವ್ಯವಸ್ಥೆ ಹಾಗೂ ಕೆಲಸ ಕಾರ್ಯಗಳನ್ನೂ ಶೀಘ್ರವಾಗಿ ನಡೆಯುವಂತಾಗಲು ಶೀಘ್ರಲಿಪಿಗಾರರು ಅವಶ್ಯಕ. ಕನ್ನಡ ಶೀಘ್ರಲಿಪಿ ಕಲಿಯಲು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹೋಗುತ್ತಿರುವ ಈ ಸಮಯದಲ್ಲಿ ಅವರಿಗೆ ಬೇಕಾದ ಪತ್ರ ಪುಸ್ತಕ ಅವಶ್ಯಕ. ಆದಕ್ಕಾಗಿ ಹಿಂದೆ ಸರ್ಕಾರದವರು ಪ್ರಕಟಿಸಿದ್ದ ಈ ಶೀಘ್ರಲಿಪಿ ಪುಸ್ತಕ ಈಗ ದೊರಕುತ್ತಿಲ್ಲ. ಇದನ್ನೇ ಬಂಡವಾಳ ಮಾಡಿಕೊಂಡ ಈ ಹಿಂದೆ ಕೆಲವು ವಾಣಿಜ್ಯ ಶಿಕ್ಷಣ ಸಂಸ್ಥೆಗಳು ಸದರಿ ಪುಸ್ತಕಗಳನ್ನು ಫೋಟೋಸ್ಟೇಟ್ ಮಾಡಿ ಹೆಚ್ಚಿನ ಹಣಕ್ಕೆ ಮಾರುತ್ತಿದ್ದರು. ಈ ಬಗ್ಗೆ ಈ ಹಿಂದೆ ಸದರಿ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಿದಾಗ ಸರ್ಕಾರದವರು ಕೂಡಲೇ ಕ್ರಮ ಕೈಗೊಂಡು ಪುಸ್ತಕಗಳನ್ನು ಒದಗಿಸುವುದಾಗಿ ಆಶ್ವಾಸನೆ ಕೊಟ್ಟು ಅದರಂತೆ ಕೆಲವು ಪುಸ್ತಗಳನ್ನು ಮುದ್ರಿಸಿ ಒದಗಿಸಿದರು. ಆದರೆ ಈಗ ಮತ್ತೆ ಹಿಂದಿನಂತೆಯೇ ಪುಸ್ತಕಗಳು ದೊರೆಯದಿದ್ದು ವಾಣಿಜ್ಯ ಸಂಸ್ಥೆಗಳು ಪುನಃ ಫೋಟೋಸ್ಟೇಟ್ ಮಾಡಿ ವಿದ್ಯಾರ್ಥಿಗಳಿಂದ ಹೆಚ್ಚಿನ ಹಣ ಸುಲಿಯುವ ಸಂಭವ ಇದೆ. ಆದ್ದರಿಂದ ಈ ಸುಲಿಗೆಗೆ ಅವಕಾಶ ಕೊಡದೆ ಸದರಿ ವಿಷಯದ ಬಗ್ಗೆ ಶೀಘ್ರ ಕ್ರಮ ಕೈಗೊಂಡು ತಕ್ಷಣ ಕನ್ನಡ ಶೀಘ್ರಲಿಪಿ ಪುಸ್ತಕಗಳನ್ನು ಮುದ್ರಿಸಿ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಹಾಗೂ ಈ ಬಗ್ಗೆ ಶಿಕ್ಷಣ ಸಚಿವರು ಹೇಳಿಕೆ ನೀಡಬೇಕೆಂದು ಆಗ್ರಹ ಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ತರಿಸಿಕೊಡುತ್ತೇನೆ.